
ಗರಿ ಬಿಚ್ಚಿ ನಿಗುರಿ ಗಗನಕ್ಕುಗಿದ ಈ ಬಾಣ
ಗಾಳಿಪಾಲಾಗಿ ನಾಲ್ಕಾರೆ ತಬ್ಬಲಿ ಪಕ್ಕ ಪುಕ್ಕ ಮಾತ್ರ ನೆಲಕ್ಕಿಳಿಸಿ
ತೆರಳುವನು.
ಈಗ ಉಳಿದದ್ದೇನು?
ನೆನೆದಾಗಲೆಲ್ಲ ಮನಸ್ಸಿನಲ್ಲಿ ಕಲಕುವ ಅವನ
ಮರೆಯಲಾರದ ಸದಾ ನಗುಮುಡಿದ ಮುಖಬಿಂಬ
ಕಣ್ಣುತುಂಬುವ ಅವನ ದೇಹದ್ಯುತಿಯ ಖಂಬ
ಮಾಯಲಾರದ ನೋವು, ತವಿಸಬಾರದ ಕೊರಗು, ಹಳಹಳಿ

ಈ ಆಕಾಶಪರವಶ ಜೀವ ಬಂತೆಲ್ಲಿಂದ ಹೋಯಿತೆಲ್ಲಿ?



## ಮಹಾತ್ಮ

ನಿನ್ನ ನೆತ್ತರು ನೆಲಕೆ ಚೆಲ್ಲಿದಂದು
ಮಣ್ಣು ನಡುಗಿತು, ಹಗಲ–ಹೂ ಬಾಡಿತು.
ನರನು ಕೆರಳುವ ಹುಂಬ, ಬಾಳು ಯೂಪಸ್ತಂಭ
ಉತ್ತಮರ ಬಲಿ ಇಲ್ಲಿ–ಬಾನಾಡಿತು.

ಮನುಕುಲದ ರಕ್ತಮಯ ಇತಿಹಾಸ ಕೂಗಿತ್ತು–
ನೆಲವು ನಂದನವಾಗಲೇನು ಬೇಕು?
ತಿಳಿವು ತುಂಬಿದ ಕಣ್ಣು, ಒಲವು ತುಂಬಿದ ಎದೆಯು,
ಛಲವನರಿಯದ ಬದುಕು, ಇಷ್ಟೆ ಸಾಕು.

ಅಂತೆ ತವಕದಿ ಬಂದೆ, ಮನದ ಮಮತೆಯ ತಂದೆ
ಹಗೆಯ ಕಾಳೋರಗವ ತವಿಪೆನೆಂದೆ.
ಇತ್ತ ಹಾಲಾಹಲವು ಅತ್ತ ಕೋಲಾಹಲವು
ಅಮೃತಹಾಸವ ಬೀರಿ ನಡೆದೆ ಮುಂದೆ.

ಬತ್ತಿದೆದೆಗಳಲು ತಿಳಿವಿನ ತೇವು ಒಡೆದಿತ್ತು
ಶಾಂತಿ–ಸಮರಸಕೆ ಇದು ಮೊದಲೆನಿಸಿತು.
ಕಲ್ಲೆದೆಯ ಸೀಮೆಯಲು ಹೂ–ಕುಸುರು. ಆಹಾ ಇದು
ಬರುವ ಭಾಗ್ಯದ ಯುಗದ ತೊದಲೆನಿಸಿತು.

ನರನ ಕಾಡಿನ ನಡತೆ ಇನ್ನೂ ಮುಗಿದಿರಲಿಲ್ಲ–
ನಿನ್ನ ಬೇಟೆಗೆ ತಾಯಿ–ಮಣ್ ನಡುಗಿತು.
ನರನು ಕೆರಳುವ ಹುಂಬ, ಬಾಳು ಯೂಪಸ್ತಂಭ
ಇಂಥ ಬಲಿ ಇನ್ನೇಸೊ!–ಬಾನ್ ಗುಡುಗಿತು.